ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Friday the 19th March 1976/Phalguna 29, 1897 SE.

The House met in the Assembly Chamber, Vidhana Soudha at One of the clock.

[MADAM SPEAKER (SMT. K. S. NAGARATHNAMMA) in the Chair.]

STARRED QUESTIONS
(to which oral answers were given)

Taking Charge of Village Panchayat Records.

189. SRI B. G. BANAKAR (Hirekerur).—Will the Minister for Rural Development and Social Welfare be pleased to state :—

(*a*) whether it is not a fact that the Village Accountant *cum*-Ex-Officio Panchayat Secretary of concerned Panchayat has to carry out all the duties and functions of Secretary as per the provisions of Village Panchayat Act, 1959 and the various rules thereunder.

(*b*) whether it is not a fact that, large number of *Ex-officio* Panchayat Secretaries of Panchayats in Dharwar District are not having the personal custody of Cash Book *i.e.*, Form No. 5 and attesting the daily balance of Panchayat as provided in the Karnataka Panchayats Budget and Account Rules, 1960

(*c*) whether it is not a fact that the large number of *Ex-officio* Panchayat Secretaries are not drawing panchayat funds by duly signing the cheque on the treasury or bank in Dharwar district as per Rule 13 of Budget and Account Rules, 1960.

(*d*) whether it is not a fact that many Reserve, Block Treasury and Bank Officers in Dharwar district are allowing persons as Secretaries other than *Ex-officio* Panchayat Secretaries in Panchayats having less than 12,000 rupees annual income to sign the cheque and withdraw the Panchayat funds contrary to rule 13 of Karnataka Budget and Account Rules, 1960.

(*e*) whether it is not a fact that large number of *Ex-officio* Panchayat Secretaries in Dharwar district have not taken the charge of Panchayat property and records from the defacto custodian inspite of the direction given by higher authorities.

(*f*) the action that the Government will take in view of the above facts and to ensure proper administration of the Panchayats ?

SRI N. RACHAIAH (Minister for Rural Development and Social Welfare).—

(*a*) Yes.

(*b*) No.

(*c*) No.

(*d*) No.

(e) The Village Accountants have taken over charge of the Village Panchayats where the Secretaries are appointed as Village Accountants except in a few cases. Necessary instructions have been issued to the Village Accountants to take over charge of the Panchayat Records, etc.

(*f*) The working of the Panchayat has not been hampered in any way though in the initial stages of the taking over and handing over there was a little dislocation. However efforts are being made to bring them on proper lines

ಶ್ರೀ ಬಿ. ಜೆ. ಬಣಕಾರ್.—ನಿಷ್ಕರ್ಷೆಯಲ್ಲಿ.....

† ಶ್ರೀ ಎನ್. ರಾಚಯ್ಯ.—ನಿಷ್ಕರ್ಷೆಯಲ್ಲಿ ನೀಡಿರುವ ಪ್ರಶ್ನೆಗೆ ಏನು ಉತ್ತರವನ್ನು ಕೊಟ್ಟಿದ್ದೇನೆ ಅದರ ಪ್ರಕಾರ (ಎ) (ಬಿ) (ಸಿ) ಇವುಗಳೂ ಕೂಡ ನಿಜ ಎಂದು ತಾವು ತಿಳಿದುಕೊಳ್ಳಬೇಕು.

ಶ್ರೀ ಬಿ. ಜೆ. ಬಣಕಾರ್.—ಧಾರವಾಡ ಜಿಲ್ಲೆಯಲ್ಲಿ ಮೈಸೂರು ಪಂಚಾಯತಿ ಸೆಕ್ರೆಟರಿಗಳ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ೧೮-೧೨-೧೯೬೦ಕ್ಕೆ ಜಾರಿಗೆ ಬಂದಿದೆ ಮುಂಬಯಿ ಆಕ್ಟ್ ಪ್ರಕಾರ ಮೈಸೂರು ಲೋಕಲ್ ಗೌರ್ನಮೆಂಟ್ ಸರ್ವೀಸ್ ಪಂಚಾಯತ್ ರೂಲ್ಸ್ ೧೯೬೨, ಇವುಗಳ ಪ್ರಕಾರ ೬೦ ಜನ ಇದ್ದರು ಹೊಸ ರೂಲ್ಸ್ ಪ್ರಕಾರ ೧೨ ಸಾವಿರ ಜನ ಕಡಿಮೆ ಉತ್ಪನ್ನ ಇರುವ ಪಂಚಾಯತಿಗಳಿಗೆ ವಿಲೇಜ್ ಅಕೌಂಟೆಂಟ್ ಮತ್ತು ಕಾರ್ಯದರ್ಶಿಗಳಾಗಿರುವವರು ಇವತ್ತಿನವರೆವಿಗೂ ಚಾರ್ಜನ್ನು ತೆಗೆದುಕೊಂಡಿಲ್ಲ. ನಾನ್ ಕ್ವಾಲಿಫೈಡ್ ಪರ್‌ಸನ್ಸ್, ಇವತ್ತು ಆಕ್ರಮವಾಗಿ ಮುಂದುವರಿಯುತ್ತಿರುವುದು ನಿಜವೇ ? ಹೀಗಿರತಕ್ಕವರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತಿರಾ ?

ಶ್ರೀ ಎನ್. ರಾಚಯ್ಯ —ಮೊದಲೇ ತಿಳಿಸಿದ ಹಾಗೆ ೨೫೪ ಜನರನ್ನು ಆ ರೀತಿಯಲ್ಲಿ ಮುಂದುವರಿಸಿದ್ದಾರೆಂದು ವರದಿ ಬಂದಿದೆ. ಈ ವಿಷಯದಲ್ಲಿ ಕೂಡಲೇ ಕ್ರಮ ತೆಗೆದುಕೊಂಡು ಯಾರು ಯಾರಿಗೆ ಅರ್ಹತೆ ಇಲ್ಲವೋ ಅವರನ್ನು ತೆಗೆದುಹಾಕಿ ವಿಲೇಜ್ ಅಕೌಂಟೆಂಟ್ಸ್ ಏನಿದ್ದಾರೆ ಅವರನ್ನೇ ಪಂಚಾಯತಿ ಸೆಕ್ರೆಟರಿಗಳಾಗಿ ಜವಾಬ್ದಾರಿಯನ್ನು ವಹಿಸಿಕೊಳ್ಳುವ ರೀತಿಯಲ್ಲಿ ಪರಿಶೀಲನೆ ಮಾಡುತ್ತೇವೆ.

---

†Asterisks indicate that remarks or speeches have not been revised by the member concerned.

SRI B. G. BANAKAR.—"The working of the Panchayat has not been hampered" ಎಂದು ಹೇಳಿದ್ದೀರಿ ಇಲ್ಲಿ ಲಕ್ಷಾಂತರ ರೂಪಾಯಿ ಹಣ ಇನ್ನೂ ಟ್ಯಾಕ್ಸ್ ವಸೂಲಿ ಆಗಿಲ್ಲ. ಟ್ಯಾಕ್ಸ್ ವಸೂಲಿ ಆಗದಿದ್ದರೂ ಸಹಿತ ಪಂಚಾಯತಿ ಕೆಲಸ ಸರಿಯಾಗಿ ಆಗದಿದ್ದರೂ ಪಂಚಾಯತಿ ಕೆಲಸ ಹೊರಗಿದ್ದು ಆಗಿಲ್ಲವೆಂದು ಹೇಳಿದ್ದೀರಿ. ಆ ಬಗ್ಗೆ ಧಾರವಾಡ ಜಿಲ್ಲಾ ಭೂ ಅಭಿವೃದ್ಧಿ ಬ್ಯಾಂಕ್‌ನವರು ರಿಪೋರ್ಟ್ ಕಳಿಸಿದ್ದಾರೆ. ಆದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್ ರಾಚಯ್ಯ —ಅವರು ತಪ್ಪು ಮಾಡಿದ ಪಕ್ಷದಲ್ಲಿ ಅವರ ಮೇಲೆ ಕ್ರಮ ತೆಗದುಕೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತೇವೆ. ಪಂಚಾಯತಿಯ ಆಡಳಿತದ ವಿಚಾರದಲ್ಲಿ ಅನೇಕ ವರ್ಷಗಳಿಂದ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಆಗಲೇ ಹೇಳಿದ್ದೇನೆ. ಅದನ್ನು ಈಗಲೂ ಕೂಡ ಒಪ್ಪುತ್ತೇನೆ. ಅದನ್ನು ವ್ಯವಸ್ಥಿತವಾಗಿ ಏರ್ಪಾಡು ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಟ್ಟಿದ್ದೇನೆ. ಈಗ ಅದನ್ನೇ ಸಮರ್ಥನೆ ಮಾಡುತ್ತೇನೆ.

ಶ್ರೀ ಬಿ. ಜಿ. ಬಣಕಾರ್.—ಹೊಸ ಪಂಚಾಯತಿ ರೂಲ್ಸ್ ಪ್ರಕಾರ ಯಾರು ಯಾರು ವಿಲೇಜ್ ಅಕೌಂಟೆಂಟ್ಸ್ ನೇಮಕ ಆಗಿಲ್ಲವೋ ಅವರನ್ನು G. O. No. D. P. C. 9 VET 72 dated 13th June 1972 says.

"The question has been carefully considered and Government are pleased to direct that persons who were already in service as Panchayat Secretaries but are now displaced as a result of the new rules being enforced should be considered for being absorbed in other posts available or becoming available in the Panchayats if found suitable and practicable". ಎಂದು ಇದೆ. ಆ ಪ್ರಕಾರ ಸ್ಕೂಟಬಲ್ ಇರುವವರನ್ನು ತೆಗೆದುಕೊಳ್ಳುವುದಕ್ಕೆ ಡೈರೆಕ್ಷನ್ ಕೊಡಿ. ಸ್ಕೂಟಬಲ್ ಇಲ್ಲದೇ ಇರುವವರನ್ನು ಮನೆಗೆ ಕಳಿಸಲಿಕ್ಕೆ ಡೈರೆಕ್ಷನ್ ಕೊಡಿ. ಹೊಸ ರೂಲ್ಸ್ ಪ್ರಕಾರ ವಿಲೇಜ್ ಅಕೌಂಟೆಂಟ್ಸ್ ತೆಗೆದುಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

SRI N. RACHAIAH.—I have already given an assurance that I am going to implement the order read out by the Hon'ble Member.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಹರಿಜನ ಹಾಗೂ ಗಿರಿಜನರ ಅಭಿವೃದ್ಧಿಗಾಗಿ ಮಂಜೂರಾಡಿದ ಹಣ

೪೦೫. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—ಗ್ರಾಮಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿಕ್ಕಮಗಳೂರು, ಮೂಡಿಕೆರೆ, ತ್ಯಂಗೇರಿ, ಕೊಪ್ಪ, ನರಸಿಂಹರಾಜಪುರ, ತರೀಕೆರೆ ಮತ್ತು ಕಡೂರು ತಾಲ್ಲೂಕು ಅಭಿವೃದ್ಧಿ ಮಂಡಲಗಳಿಗೆ ಕಳೆದ ಮೂರು ವರ್ಷಗಳಿಂದ ೧೯೭೨—೭೩, ೧೯೭೩—೭೪, ೧೯೭೪—೭೫ ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಎಷ್ಟು ಗ್ರಾಂಟುಗಳನ್ನು ಮಂಜೂರು ಮಾಡಲಾಗಿದೆ ;

(ಆ) ಪ್ರತಿಯೊಂದು ಸಂಘ ಮಂಜೂರು ಮಾಡಿರುವ ನಗದು ಹಣ, ವಸ್ತುಗಳು ಅಥವಾ ಸಾಮಾನುಗಳ ರೂಪದಲ್ಲಿ ಪಾವತಿಮಾಡಿರುವ ಹಣದ ಮೊತ್ತವೆಷ್ಟು ;

(ಇ) ಪಾವತಿ ಮಾಡಿರುವ ಗ್ರಾಮಗಳ ಹೆಸರುಗಳೇನು?